ಎಫ್ ಡಿ ಪಿ ನಂ. 7/2019
ಪಿ ಡಬ್ಲ್ಯು 2
ದಿನಾಂಕ 13-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ</u>

ಪ್ರಸ್ತುತ ಅರ್ಜಿಯ 4 ನೇ ಎದುರುದಾರರು ನನಗೆ ಗಂಡನಾಗಬೇಕು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಗಂಡನ ಹೆಸರನ್ನು ನಮೂದಿಸದೆ ನನ್ನ ತಂದೆಯ ಹೆಸರನ್ನು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸಹಿ ಮಾಡಿರುತ್ತೇನೆ ಎಂದು ಹೇಳಲಾದ ವಿಲ್ ನಾಮೆಯಲ್ಲೂ ಸಹ ನಾನು ನನ್ನ ಗಂಡನ ಹೆಸರನ್ನು ನಮೂದಿಸದೆ ನನ್ನ ತಂದೆಯ ಹೆಸರನ್ನು ಮಾತ್ರ ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ನಾನು ನನ್ನ ತಂದೆಯ ಹೆಸರನ್ನು ಬರೆದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಲ್ ನಾಮೆಯಲ್ಲಿ ನನ್ನ ತಂದೆಯ ಹೆಸರನ್ನು ಮಲ್ಲೇಶಪ್ಪ ಎಂದು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ, ನಾನು ನನ್ನ ಸಹಿಯನ್ನು ಮಾತ್ರ ಮಾಡಿರುತ್ತೇನೆ. ದಿನಾಂಕ 10/06/2020 ರ್ಹದು ನಾನು ವಿಲ್ ನಾಮೆಗೆ ಮನೆಯಲ್ಲಿ ಸಹಿ ಮಾಡಿರುತ್ತೇನೆ, ಆ ಸಮಯದಲ್ಲಿ ಉಪನೊಂದಣಾಧಿಕಾರಿಗಳು ಮನೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಮನೆಯಲ್ಲಿ ಯಾರು ಯಾರು

ಇದ್ದರು ಎಂದರೆ ಸಾಕ್ಷಿ ನಾನು, ಅಂಜನಪ್ಪ, ಸುಧಾ, ಶ್ರೀಧರ ಮತ್ತು ನನ್ನ ಗಂಡ ಶ್ರೀನಿವಾಸರವರು ಇದ್ದೇವು ಎಂದು ನುಡಿಯುತ್ತಾರೆ. ನನ್ನ ಗಂಡ ಶ್ರೀನಿವಾಸರವರೇ ಉಪನೊಂದಣಾಧಿಕಾರಿಗಳನ್ನು ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸದರಿ ವಿಲ್ ನಾಮೆಗೆ ಸುಧಾ ಮತ್ತು ಶ್ರೀಧರ್ ರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಸುಧಾ ಮತ್ತು ಶ್ರೀಧರ್ ರವರಿಗೆ ಸಹಿ ಮಾಡುವಂತೆ ನನ್ನ ಗಂಡನಾಗಲಿ ಉಪನೊಂದಣಾಧಿಕಾರಿಗಳಾಗಲಿ ಕರೆದಿಲ್ಲವೇ ಎಂದರೆ ಸಾಕ್ಷಿ ಕರೆದಿರುತ್ತಾರೆ ಅವರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಉಪನೊಂದಣಾಧಿಕಾರಿಗಳು ಮನೆಯಲ್ಲಿದ್ದ ಸಮಯದಲ್ಲಿ ಅಂಜನಪ್ಪರವರ ಭಾವಚಿತ್ರಗಳನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಗಂಡ ಮತುತ ನನ್ನ ಮಾವ ಅಂಜನಪ್ಪರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಒಟ್ಟು ಎಷ್ಟು ಭಾವಚಿತ್ರಗಳನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಪೋಟೋಗಳನ್ನು ನನ್ನ ಗಂಡನೇ ನೀಡಿದ್ದು 3-4 ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು ಎಷ್ಟು ಪುಟಗಳಿಗೆ ಅಂಟಿಸಲಾಗಿದೆ ಎಂದು ನಾನು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಭಾವಚಿತ್ರಗಳನ್ನು ಅಂಟಿಸುತ್ತಿದ್ದರು ಆದರೆ ನಾನು ನೋಡಲು ಹೋಗಿಲ್ಲ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳು ಹಳೆಯದವಾ ಅಥವಾ ಇತ್ತೀಚೆಗೆ ತೆಗೆದ ಭಾವಚಿತ್ರವಾ ಎಂದರೆ ಸಾಕ್ಷಿ ಇತ್ತೀಚೆಗೆ ತೆಗೆದ ಭಾವಚಿತ್ರ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರ

ತೆಗೆಯಲು ಯಾರು ಬಂದಿದ್ದರು ಎಂದರೆ ಸಾಕ್ಷಿ ನನ್ನ ಮಾವ ಅಂಜನಪ್ಪರವರು ಆ ಸಮಯದಲ್ಲಿ ಓಡಾಡಿಕೊಂಡು ಚೆನ್ನಾಗಿದ್ದು ಅವರೇ ಸ್ಟುಡಿಯೋಗೆ ಹೋಗಿ ಫೋಟೋ ಬೇಕಾಗುತ್ತದೆ ಎಂದು ತೆಗೆಸಿರುತ್ತಾರೆ ಎಂದು ನುಡಿಯುತ್ತಾರೆ. ವಿಲ್ ನಾಮೆ ಮಾಡುವ ಎಷ್ಟು ದಿನಗಳ ಪೂರ್ವದಲ್ಲಿ ಸದರಿ ಭಾವಚಿತ್ರಗಳನ್ನು ತೆಗೆಯಲಾಗಿದೆ ಎಂದರೆ ಸಾಕ್ಷಿ ಸುಮಾರು ಎರಡೂವರೆ ಮೂರು ವರ್ಷಗಳ ಹಿಂದೆ ಏನಾಕ್ಕಾದರೂ ಬೇಕಾಗುತ್ತದೆ ಎಂದು ತೆಗೆಸಿರುತ್ತಾರೆ ಎಂದು ನುಡಿಯುತ್ತಾರೆ. ವಿಲ್ ನಾಮೆಯ ಸಮಯದಲ್ಲಿ ಕೊಟ್ಟಂತಹ ಭಾವಚಿತ್ರಗಳು ಇತ್ತೀಚಿನ ಭಾವಚಿತ್ರಗಳಲ್ಲ ಎಂದರೆ ಸರಿ. ಉಪನೊಂದಣಾಧಿಕಾರಿಗಳು ನಮ್ಮ ಮನೆಗೆ ಬಂದ ಎಷ್ಟು ಸಮಯದ ನಂತರ ಅಂಜನಪ್ಪರವರ ಕೋಣೆಗೆ ಹೋದರು ಎಂದರೆ ಸಾಕ್ಷಿ ಅಂಜನಪ್ಪರವರು ಅವರು ಮಮೂಲಿಯಾಗಿ ಕುಳಿತುಕೊಳ್ಳುವ ಕುರ್ಚಿಯಲ್ಲಿ ಹಾಲಿನಲ್ಲಿಯೇ ಕುಳಿತುಕೊಂಡಿದ್ದು, ಉಪನೊಂದಣಾಧಿಕಾರಿಗಳು ಬಂದು ಹೋಗುವವರೆಗೂ ಅವರು ಅಲ್ಲೇ ಕುಳಿತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ವಿಲ್ ನಾಮೆ ಅಂಜನಪ್ಪರವರು ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಎರಡನ್ನೂ ಮಾಡಿರುತ್ತಾರೆ. ಅಂಜನಪ್ಪರವರು ಎಷ್ಟು ಸಹಿಗಳನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ಸಹಿ ಮಾಡಿರುತ್ತಾರೆ ಆದರೆ ಎಷ್ಟು ಸಹಿಗಳು ಎಂದು ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಲ್ ನಾಮೆ ಎಷ್ಟು ಪುಟಗಳನ್ನು ಹೊಂದಿತ್ತು ಮತ್ತು

ಅಂಜನಪ್ಪರವರು ಎಷ್ಟು ಸಹಿ ಮಾಡಿರುತ್ತಾರೆ ಎಂದು ನಾನು ಗಮನಿಸಿಲ್ಲ ಎಂದು ಕೇಳಲಾಗಿ ಸಾಕ್ಷಿ ನಾನು ಅಷ್ಟು ಗಮನಿಸಿರುವುದಿಲ್ಲ, ಆದರೆ ನನ್ನ ಗಂಡ ಶ್ರೀನಿವಾಸ್ ಅಲ್ಲಿ ಇದ್ದರು ಎಂದು ನುಡಿಯುತ್ತಾರೆ. ಅಂಜನಪ್ಪರವರ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಪಡೆಯುವ ಕೆಲಸವನ್ನು ನನ್ನ ಗಂಡ ಶ್ರೀನಿವಾಸ್ ರವರೇ ಮಾಡಿರುತ್ತಾರೆ ಎಂದರೆ ಸಾಕ್ಷಿ ಅಂಜನಪ್ಪರವರ ಮಕ್ಕಳು ಸಹ ಹಾಜರಿದ್ದರು ಎಂದು ನುಡಿಯುತ್ತಾರೆ. ಅಂಜನಪ್ಪರವರ ಸಹಿಯನ್ನು ಗುರುತಿಸುವಂತೆ ನನ್ನ ಗಂಡನೇ ಹೇಳಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಉಪನೊಂದಣಾಧಿಕಾರಿಗಳು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

2005 ರಲ್ಲಿ ನನ್ನ ವಿವಾಹ ಆಗಿರುತ್ತದೆ. ನನ್ನ ಮದುವೆಯ ಸಮಯದಲ್ಲಿ ನನ್ನ ಅತ್ತೆ ಮತ್ತು ಮಾವ ಇಬ್ಬರು ಜೀವಂತವಾಗಿದ್ದರು ಎಂದರೆ ಸರಿ. ನನ್ನ ಮದುವೆಯ ಶಾಸ್ತ್ರ ಮತ್ತು ಕಾರ್ಯಗಳನ್ನು ಅರ್ಜಿದಾರರಾದ ಶೋಭಾರವರೇ ನಿಂತು ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ಮಾವ ಅಂಜನಪ್ಪರವರು ಆ ಕಾರ್ಯವನ್ನು ಮಾಡಿರುತ್ತಾರೆ, ಆ ಸಮಯದಲ್ಲಿ ಅಂಜನಪ್ಪರವರ ಎಲ್ಲಾ ಮಕ್ಕಳು ಸಹ ಹಾಜರಿದ್ದರು ಎಂದು ನುಡಿಯುತ್ತಾರೆ. ವಾದಿ ಮೂಲ ದಾವೆಯನ್ನು 2015 ರಲ್ಲಿ ಹೂಡಿದ ನಂತರದಲ್ಲಿ ಅಂಜನಪ್ಪರವರು ಎಲ್ಲಿಯೂ ಸಹ ಓಡಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಅವರು ಜಮೀನಿಗೆ ಮಾತ್ರ ಹೋಗುತ್ತಿರಲಿಲ್ಲ ಇತರೇ ಆಗಿ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯದ

ಕಲಾಪಗಳಿಗೆ ಮತ್ತು ಕಚೇರಿಗಳಿಗೆ ನನ್ನ ಗಂಡ ಶ್ರೀನಿವಾಸ್ ರವರೇ ಹಾಜರಾಗುತ್ತಿದ್ದರು ಎಂದರೆ ಸರಿ. ದಿನಾಂಕ 10/06/2020 ರಂದು ಉಪನೊಂದಣಾಧಿಕಾರಿಗಳ ಜತೆಗೆ ಒಟ್ಟು ಎಷ್ಟು ಜನ ಮನೆಗೆ ಬಂದಿದ್ದರು ಎಂದರೆ ಸಾಕ್ಷಿ ಒಟ್ಟು 4 ಜನ ಎಂದು ನುಡಿಯುತ್ತಾರೆ. ಅವರು ಯಾರು ಯಾರು ಎಂದು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಕಾಂತರಾಜು, ಬಸವರಾಜು, ನನ್ನ ಗಂಡ ಶ್ರೀನಿವಾಸ ಮತ್ತು ಉಪನೊಂದಣಾಧಿಕಾರಿಗಳು ಹಾಗೂ ವಕೀಲರಾದ ಬಾಲಾಜಿರವರು ಇದ್ದರು ಎಂದು ನುಡಿಯುತ್ತಾರೆ. ಅವರು ಅಲ್ಲಿ ಏನು ಮಾಡಿರುತ್ತಾರೆ ಎಂದರೆ ಸಾಕ್ಷಿ ಉಪನೊಂದಣಾಧಿಕಾರಿಗಳು ಬಂದ ವಿಚಾರವನ್ನು ತಿಳಿದು ನನ್ನ ಮಾವ ಕೋಣೆಯಿಂದ ಹಾಲಿಗೆ ಬಂದಿರುತ್ತಾರೆ ಮತ್ತು ಅಲ್ಲಿ ಎಲ್ಲಾ ಪ್ರಕ್ರಿಯೆಗಳು ನಡೆದಿರುತ್ತವೆ ಎಂದುನುಡಿಯುತ್ತಾರೆ. ವಿಲ್ ನಾಮೆ ಬರೆಯಲಾಗಿದೆ ಎಂದು ಹೇಳುವ ಕಾಲಕ್ಕೆ ನನ್ನ ಮಾವನಿಗೆ 93 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ 90 ವರ್ಷ ಆಗಿತ್ತು ಎಂದು ನುಡಿಯುತ್ತಾರೆ. ನನ್ನ ಮಾವನಿಗೆ 90 ವರ್ಷ ವಯಸ್ಸಾಗಿದ್ದರಿಂದ 2015 ರಿಂದಲೇ ಅವರು ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ಮಾವನಿಗೆ ಬಿ ಪಿ ಮತ್ತು ಶುಗರ್ ಇದ್ದು ಪಾರ್ಶ್ವವಾಯು ಸಹ ಹೊಡೆದಿತ್ತು ಎಂದರೆ ಸಾಕ್ಷಿ ಬಿ ಪಿ ಮತ್ತು ಶುಗರ್ ನನ್ನ ಮದುವೆಯ ಮೊದಲೇ ಇತ್ತು ಹಾಗೂ ನನ್ನ ಮದುವೆಯ ಪೂರ್ವದಲ್ಲೇ ನನ್ನ ಮಾವನಿಗೆ ಪಾರ್ಶ್ವವಾಯು ಹೊಡೆದಿತ್ತು ಅದನ್ನು ನನ್ನ ಗಂಡ ಓಡಾಡಿಕೊಂಡು

ಚಿಕಿತ್ಸೆ ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಂಜನಪ್ಪರವರ ತಲೆಗೆ ಪಾರ್ಶ್ವವಾಯು ಹೊಡೆದಿತ್ತು ಎಂದರೆ ಸಾಕ್ಷಿ ಇಲ್ಲ ಬಾಯಿಗೆ ಆಗಿತ್ತು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಬಾಯಿಗೆ ಪಾರ್ಶ್ವವಾಯು ಹೊಡೆದ ಸಮಯದಲ್ಲಿ ಮಾತನಾಡಲು ಆಗುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ಚಿಕಿತ್ಸೆ ಕೊಡಿಸಿದ್ದು ಅವರು ಮಾತನಾಡುತ್ತಿದ್ದರು ಎಂದು ನುಡಿಯುತ್ತಾರೆ. ಪಾರ್ಶ್ವವಾಯು ಹೊಡೆದ ನಂತರ ನನ್ನ ಮಾವ ಸಹಿ ಮಾಡುತ್ತಿದ್ದರಾ ಅಥವಾ ಹೆಬ್ಬೆಟ್ಟನ್ನು ಹಾಕುತ್ತಿದ್ದರಾ ಎಂದರೆ ಸಾಕ್ಷಿ ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 10/06/2020 ರಂದು ನನ್ನ ಮಾವ ವಿಲ್ ನಾಮೆ ಮಾಡಿರುತ್ತಾರೆಂದು ನನ್ನ ಗಂಡನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಲ್ ನಾಮೆಯನ್ನು ನನ್ನ ಎದುರಿನಲ್ಲೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 10/06/2020 ರಂದು ವಕೀಲರಾದ ಬಾಲಾಜಿ, ಕಾಂತರಾಜು ಮತ್ತು ಬಸವರಾಜುರವರು ಬಂದಿರಲಿಲ್ಲ ಎಂದರೆ ಸಾಕ್ಷಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.